ತತ್ವವನ್ನಾಗಿಸಿಕೊಂಡ ಭಾರತದ ವಿಶಿಷ್ಟ ಜಾತ್ಯತೀತ ಆಶ್ರಮ. ಇದು ಬಲರಾಜ್ ಸಾಹ್ನಿ, ಸಾಹಿರ್ ಲುಧಿಯಾನ್ವಿ, ಅಮೃತಾಪ್ರೀತಂ ಮುಂತಾದ ಪಂಜಾಬಿ ಲೇಖಕರು–ಕಲಾವಿದರು ಅಮೃತಸರದ ಬಳಿ ರೂಪಿಸಿದ ಪ್ರೀತ್‌ನಗರ್ ಎಂಬ ಆದರ್ಶ ಗ್ರಾಮವನ್ನು ನೆನಪಿಸುತ್ತದೆ.

## ಆಧ್ಯಾತ್ಮಿಕ ಆಯಾಮ

ತಾರಾನಾಥರು ಮೂಲತಃ ಒಬ್ಬ ಯೋಗಿ. ಮೊದಲಿಗೆ ಅವರು ಹೈದರಾಬಾದಿನ ರಾಮಕೃಷ್ಣ ಮಠದಲ್ಲಿ ಯೋಗವಿದ್ಯೆ ಕಲಿತರು. ಬೀದರಿನಲ್ಲಿದ್ದಾಗ ಮಂಗಯ್ಯ ಮಹಾರಾಜರ ಜತೆಗೂಡಿ ಯೋಗಸಾಧನಗೈದರು. ತುಂಗಭದ್ರಾದಲ್ಲಿದ್ದಾಗ, ಯೋಗಿನಿ ಆದೋನಿ ಲಕ್ಷ್ಮಮ್ಮ ಹಾಗೂ ರುದ್ರಮುನಿಯಪ್ಪನವರ ಜತೆ ಅವರಿಗೆ ಒಡನಾಟ ಏರ್ಪಟ್ಟಿತು. ಪ್ರೇಮಾಯತನಕ್ಕೆ ಯೋಗಗುರು ಬಿ.ಕೆ.ಎಸ್. ಅಯ್ಯಂಗಾರ್ ಆಗಾಗ್ಗೆ ಭೇಟಿಕೊಡುತ್ತಿದ್ದರು. ತಾರಾನಾಥರ ಆಧ್ಯಾತ್ಮಿಕ ವ್ಯಕ್ತಿತ್ವವನ್ನು ಕಂಡ ಹುಮನಾಬಾದಿನ ಮಾಣಿಕ್ಯಪ್ರಭುಗಳು, ತಮ್ಮ ಧರ್ಮ ಸಾಮರಸ್ಯ ಪರಂಪರೆಯ ಪೀಠಕ್ಕೆ ಉತ್ತರಾಧಿಕಾರಿಯನ್ನಾಗಿ ನೇಮಿಸಬೇಕೆಂದು ಆಲೋಚಿಸಿದ್ದರೆಂದು ತಿಳಿದುಬರುತ್ತದೆ. ಈ ದಿಸೆಯಲ್ಲಿ, ತಾರಾನಾಥರು ಪಾಶ್ಚಿಮಾತ್ಯ ಸಾಧಕನಿಗೆ ಕೊಟ್ಟಿರುವ ಸಂದರ್ಶನವು, ಅಧ್ಯಾತ್ಮವನ್ನು ಕುರಿತ ಅವರ ನಿಲುವನ್ನು ಸ್ಪಷ್ಟಗೊಳಿಸುತ್ತದೆ. ಅಲ್ಲಿ, ಸಾಂಪ್ರದಾಯಿಕ ದೇವರು–ಧರ್ಮಗಳನ್ನು ಒಪ್ಪದೆಯೂ, ಧ್ಯಾನ ಮತ್ತು ಲೋಕಪ್ರೀತಿಗಳ ಮೂಲಕ ನಿಜವಾದ ದೈವಿಕ ಅನುಭವವನ್ನು ಸಾಧಕರು ಪಡೆದುಕೊಳ್ಳಬಹುದು ಎಂದವರು ವಿವರಿಸುತ್ತಾರೆ. ತಾರಾನಾಥರು ಸೂಫಿಗಳಂತೆ, ಶರಣರಂತೆ, ತತ್ವಪದಕಾರರಂತೆ ಸಾಂಪ್ರದಾಯಿಕ ಅರ್ಥದ ದೈವದ ಹಂಗಿಲ್ಲದೆಯೂ ಆಧ್ಯಾತ್ಮಿಕ ಸಾಧನೆ ಸಾಧ್ಯವೆನ್ನುವ ಪರಂಪರೆಗೆ ಸೇರಿದವರು.

ಕುವೆಂಪು ವಿರಚಿತ ನಾಡಗೀತೆಯಲ್ಲಿ ಕರ್ನಾಟಕವನ್ನು 'ಹಿಂದೂ ಕ್ರೈಸ್ತ ಮುಸಲ್ಮಾನ ಪಾರಸಿಕ ಜೈನರುದ್ಯಾನ'ವೆಂದೂ 'ಸರ್ವಜನಾಂಗದ ಶಾಂತಿಯ ತೋಟ'ವೆಂದೂ ಬಣ್ಣಿಸಲಾಗಿದೆಯಷ್ಟೆ. ಈ ಗೀತೆ ರಚನೆಯಾಗುವ ನಾಲ್ಕು ವರ್ಷಕ್ಕೆ ಮೊದಲು, ತಾರಾನಾಥರು ಹಮ್‌ದರ್ದ್ ಶಾಲೆಯ ಮಕ್ಕಳಿಗೆ ರಚಿಸಿದ ಪ್ರಾರ್ಥನ ಗೀತೆಯಲ್ಲಿ ಇದೇ ಆಶಯವನ್ನು ಕಾಣಿಸಿದ್ದರು:

ಆಶೀರ್ವಾದ್ ದೇದೋ ಕಾಶಿ ಓ ಕಾಬೇವಾಲೇ ಬಸ್ ತೂಹಿ ಹೈ ಹರ್ ಮೆ ಹರ್ ಮನಮೆ  
ರಹನೆವಾಲೆ  
ಹಿಂದುವೋ ಬೌದ್ಧ ಭಾಯಿ, ಯಹೂದಿ ಔರ ಸಿಖ್ ಇಸಾಯಿ ಯಮನ್ ಓ ಫಾರಸಿ  
ತೇರೇ ಹೈ ಗೋರೆ ಕಾಲೆ

'ಕಾಶಿ ಮತ್ತು ಕಾಬಾಗಳಲ್ಲಿ ಇರುವವನೇ, ಸಮಸ್ತ ಮಾನವರ ಮತ್ತು ಅವರ ಮನದಲ್ಲಿ ಇರುವವನೇ, ಹಿಂದೂ, ಬೌದ್ಧ, ಯಹೂದಿ ಸಿಖ್, ಕ್ರೈಸ್ತ ಧರ್ಮಗಳಲ್ಲಿ, ಯೆಮನ್–ಇರಾನ್ ದೇಶಗಳಲ್ಲಿ, ಕಪ್ಪು ಮತ್ತು ಬಿಳಿ ಬಣ್ಣದವರಲ್ಲಿ ಇರುವವನೇ, ನಮ್ಮನ್ನು ಹರಸು' ಎಂಬುದು ಇದರರ್ಥ. ಇಲ್ಲಿ ಧರ್ಮ ಜಾತಿ ವರ್ಣ ದೇಶಗಳಾಚೆ ಸಮಸ್ತ ಮಾನವರಲ್ಲಿ ಚೈತನ್ಯರೂಪವನ್ನು ಕಾಣುವ ಆಶಯವಿದೆ. ಇದನ್ನು ಆಧ್ಯಾತ್ಮಿಕ ವಿಶ್ವಮಾನವ ತತ್ವವೆಂದೂ ಕರೆಯಬಹುದು. ತಾರಾನಾಥರು ಶಾಲೆಗೆ 'ಹಮ್‌ದರ್ದ್' ಎಂಬ ಉರ್ದು ಹೆಸರನ್ನು ಇಡುವುದಕ್ಕೆ ಕೆಲವರು ಆಕ್ಷೇಪಿಸಿದ್ದರಂತೆ. ಆಗ ಹೆರರ ನೋವು ನಮ್ಮದೆಂದು ತಿಳಿಯುವ ಭಾವವು 'ಅನುಕಂಪ', 'ಸಹಾನುಭೂತಿ' ಶಬ್ದಗಳಲ್ಲಿಲ್ಲ. ಹಮ್‌ದರ್ದ್ ಎನ್ನುವುದು ಒಂದು ವಿಶಿಷ್ಟವಾದ ನುಡಿಗಟ್ಟು ಎಂದು ತಾರಾನಾಥರು ವ್ಯಾಖ್ಯಾನಿಸಿದರಂತೆ. ಬುದ್ಧನ ಬಗ್ಗೆ ತಾರಾನಾಥರು ಬರೆದಿರುವುದು ಕಡಿಮೆಯಾದರೂ, 'ಹಮ್‌ದರ್ದ್' ಪರಿಕಲ್ಪನೆಯು ಬುದ್ಧನ ಕರುಣೆ ಮೈತ್ರಿಗೆ ಸಮನಾದ ಅರ್ಥವನ್ನು ಹೊಂದಿದೆ.